# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

**ಡಾ|| ಟಿ. ಬಿ. ಅಳ್ಳೊಳ್ಳಿ,** ಪಿ.ಹೆಚ್‌ಡಿ (ತೋಟಗಾರಿಕೆ)
ಕುಲಸಚಿವರು
ಮೊಬೈಲ್ ಸಂ. 94806 96389
ದೂರವಾಣಿ ಸಂ. 08354-230276/278/286/280

**ಕುಲಸಚಿವರ ಕಾರ್ಯಾಲಯ**
ಉದ್ಯಾನಗಿರಿ, ನವನಗರ
ಬಾಗಲಕೋಟ – 587104, ಕರ್ನಾಟಕ
ಮಿಂಚಂಚೆ:registrar@uhsbagalkot.edu.in

ಸಂಖ್ಯೆ: ಕುಸ/ತೋವಿವಿ/ಘಟಿಕೋತ್ಸವ-10/ ೧೦೦೯ /2020-21 ದಿನಾಂಕ: 20.01.2021

## ಅಧಿಸೂಚನೆ

**ವಿಷಯ:** ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 10ನೇ ಘಟಿಕೋತ್ಸವಕ್ಕೆ ಅರ್ಜಿ ಸಲ್ಲಿಸುವ ಕುರಿತು.

**ಉಲ್ಲೇಖ:** 1) ಶಿಕ್ಷಣ ನಿರ್ದೇಶಕರು, ತೋ.ವಿ.ವಿ., ಬಾಗಲಕೋಟ ಇವರ ಶಿಫಾರಸ್ಸು.
2) ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟ ಇವರ ಆದೇಶ.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 10ನೇ ಘಟಿಕೋತ್ಸವವು ಮಾರ್ಚ್ 2021 ರ ಕೊನೆಯ ಪಕ್ಷದಲ್ಲಿ ಜರುಗಲಿದೆ. ಕಾರಣ ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ **ದಿ:20.02.2021** ರ ಒಳಗಾಗಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ಸದರಿ ಘಟಿಕೋತ್ಸವದಲ್ಲಿ "ಸಮಕ್ಷಮ" ಇಲ್ಲವೇ " ಅನುಪಸ್ಥಿತಿಯಲ್ಲಿ" ಪದವಿಯನ್ನು ಪಡೆಯಬಹುದಾಗಿದೆ. ಈ ಕುರಿತಂತೆ ನಿಗದಿತ ಅರ್ಜಿ ನಮೂನೆ, ಚಲನ್ ಪ್ರತಿ ಹಾಗೂ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ (ಅಂತರ್ಜಾಲ) **www.uhsbagalkot.edu.in or www.uhsbagalkote.karnataka.gov.in** ನಲ್ಲಿ ದಿನಾಂಕ 20.01.2021 ರಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲಾತಿ ಮತ್ತು ಅವಶ್ಯಕ ಶುಲ್ಕ ಪಾವತಿಸಿದ ರಶೀದಿ ಲಗತ್ತಿಸಿ ದಿನಾಂಕ: 20.02.2021 ರ ಒಳಗೆ **ಕುಲಸಚಿವರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಉದ್ಯಾನಗಿರಿ, ಬಾಗಲಕೋಟ-587104** ಇವರಿಗೆ ಸಲ್ಲಿಸತಕ್ಕದ್ದು. 'ಸಮಕ್ಷಮ ಇಲ್ಲವೇ 'ಅನುಪಸ್ಥಿತಿ'ಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಕೆಳಗಿನಂತೆ ನಿಗದಿತ ಶುಲ್ಕವನ್ನು ಪಾವತಿಸಬೇಕು. ಶುಲ್ಕ ಪಾವತಿಸಬೇಕಾದ ಬ್ಯಾಂಕ ಚಲನ್ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅರ್ಜಿ ಶುಲ್ಕ ಹಾಗೂ ಬ್ಯಾಂಕ್ ಸೇವಾ ಶುಲ್ಕವನ್ನು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾದ ಯಾವುದಾದರೂ ಶಾಖೆಯಲ್ಲಿ ಪಾವತಿಸಿ ವಿಶ್ವವಿದ್ಯಾಲಯದ ಚಲನ್ ಪ್ರತಿಯನ್ನು ಮತ್ತು ಅಗತ್ಯ ದಾಖಲಾತಿಯನ್ನು ಭರ್ತಿ ಮಾಡಿದ ಅರ್ಜಿ ಜೊತೆಗೆ ಲಗತ್ತಿಸಿ ಸಲ್ಲಿಸಬೇಕು. **ಕೊನೆಯ ದಿನಾಂಕದ ನಂತರ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ**. ಶುಲ್ಕದ ವಿವರ ಈ ಕೆಳಕಂಡಂತೆ ಇರುತ್ತದೆ.

| ಪದವಿ | ಸಮಕ್ಷಮ | ಅನುಪಸ್ಥಿತಿಯಲ್ಲಿ |
|---|---|---|
| ಬಿ.ಎಸ್ಸಿ. (ಹಾನರ್ಸ್.) ತೋಟಗಾರಿಕೆ / ಬಿ.ಟೆಕ್. (ಆಹಾರ ತಂತ್ರಜ್ಞಾನ) | ರೂ.1,500 + ಬ್ಯಾಂಕ ಸೇವಾ ವೆಚ್ಚ | ರೂ.2,000+ ಬ್ಯಾಂಕ ಸೇವಾ ವೆಚ್ಚ |
| ಎಂ.ಎಸ್ಸಿ. (ತೋಟಗಾರಿಕೆ) | ರೂ.3,000+ ಬ್ಯಾಂಕ ಸೇವಾ ವೆಚ್ಚ | ರೂ.3,500+ ಬ್ಯಾಂಕ ಸೇವಾ ವೆಚ್ಚ |
| ಪಿಎಚ್.ಡಿ | ರೂ.5,000+ ಬ್ಯಾಂಕ ಸೇವಾ ವೆಚ್ಚ | ರೂ.5,500+ ಬ್ಯಾಂಕ ಸೇವಾ ವೆಚ್ಚ |

**ಸೂಚನೆ:** ಈಗಾಗಲೇ ನಿಗದಿತ ಶುಲ್ಕವನ್ನು ಸಂಬಂಧಪಟ್ಟ ಕಾಲೇಜನಲ್ಲಿ ಪಾವತಿಸಿ, ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಅದರಂತೆ ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಹೆಸರುಗಳನ್ನು (ಕನ್ನಡ ಹಾಗೂ ಇಂಗ್ಲಿಷನಲ್ಲಿ) ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ **ದಿ:10.02.2021** ರಂದು ಪ್ರಕಟಿಸಲಾಗುವುದು. ತಮ್ಮ ಹೆಸರಿನಲ್ಲಿ ಯಾವುದೇ ತಿದ್ದುಪಡಿ ಮಾಡಬೇಕಾಗಿದ್ದಲ್ಲಿ ಅದನ್ನು **ದಿ:20.02.2021ರ** ಒಳಗಾಗಿ ಸಂಬಂಧಪಟ್ಟ ಅಗತ್ಯ ದಾಖಲಾತಿಯೊಂದಿಗೆ ಕುಲಸಚಿವರು ಇವರಿಗೆ (ಮಿಂಚಂಚೆ : registrar@uhsbagalkot.edu.in ) ತಿಳಿಸುವುದು.

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು.
ತೋ.ವಿ.ವಿ.ಬಾಗಲಕೋಟ

**ಇವರಿಗೆ,**

1) ಎಲ್ಲಾ ಮಹಾವಿದ್ಯಾಲಯಗಳ ಡೀನ್‌ಗಳು, ತೋ.ವಿ.ವಿ, ಬಾಗಲಕೋಟ
2) ಎಲ್ಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ವಿಭಾಗ/ಹಣಕಾಸು ವಿಭಾಗಗಳು, ತೋ.ವಿ.ವಿ, ಬಾಗಲಕೋಟ.

**ಪ್ರ.ಆ.ಪೂ:**-1) ಕುಲಸಚಿವರು, ಕೃವಿವಿ., ಬೆಂಗಳೂರು / ಧಾರವಾಡ/ ರಾಯಚೂರು /ಕ.ಪ.ವೈ.ವಿ., ಬೀದರ/ ಕೃ &ತೋ.ವಿ, ಶಿವಮೊಗ್ಗ

2) ಡೀನ್ (ಸ್ನಾತಕೋತ್ತರ)/ಸಂಶೋಧನಾ ನಿರ್ದೇಶಕರು/ವಿಸ್ತರಣಾ ನಿರ್ದೇಶಕರು/ ಹಣಕಾಸು ನಿಯಂತ್ರಣಾಧಿಕಾರಿಗಳು/ ಡೀನ್ (ವಿದ್ಯಾರ್ಥಿ ಕಲ್ಯಾಣ) /ಆಸ್ತಿ ಅಧಿಕಾರಿಗಳು, ತೋವಿವಿ, ಬಾಗಲಕೋಟ

3) ವಿಶ್ವವಿದ್ಯಾಲಯದ ಗ್ರಂಥಪಾಲಕರು, ತೋ.ವಿ.ವಿ, ಬಾಗಲಕೋಟ-ಈ ಮೇಲಿನ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ದಲ್ಲಿ ಪ್ರಕಟಿಸಲು ಕೋರಿದೆ.

4) ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ, ಬಾಗಲಕೋಟ

**ಆ.ಪೂ.ಪ್ರ.**- ಶಿಕ್ಷಣ ನಿರ್ದೇಶಕರು, ತೋ.ವಿ.ವಿ, ಬಾಗಲಕೋಟ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.